ಶ್ರೀಮತಿ ಯಶೋಧರ ದಾಸಪ್ಪ.—ಕುಡಿಯುವ ನೀರು ಇಲ್ಲದೆ ಇರುವ ಕಡೆ ಬಾವಿಗಳನ್ನು ಒದಗಿಸಬೇಕಾದದ್ದು ಸರ್ಕಾರದವರ ಉದ್ದೇಶ ಮತ್ತು ಸರ್ಕಾರದವರ ಜವಾಬ್ದಾರಿ. ಸಾಮಾನ್ಯವಾಗಿ ಎಲ್ಲಾ ಊರುಗಳಲ್ಲಿಯೂ ಒಂದೊಂದು ಬಾವಿ ಇದ್ದೇ ಇರುತ್ತದೆ. ಆದ್ದರಿಂದ ಊರಿನ ಎಲ್ಲಾ ಜನಗಳೂ ಸೇರಿ ಆ ಬಾವಿಯಲ್ಲಿ ಎಲ್ಲಾ ಜನಗಳೂ ನೀರನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಟ್ಟರೆ ಒಳ್ಳೆಯದು. ಆದರೆ ಹರಿಜನರನ್ನು ಬೇರೆಯವರ ಬಾವಿಯಲ್ಲಿ ನೀರು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು. ಆದರೆ ಹರಿಜನರನ್ನು ಬೇರೆಯವರ ಬಾವಿಯಲ್ಲಿ ನೀರು ತೆಗೆದುಕೊಳ್ಳಲು ಬಡದೆ ಇರುವುದರಿಂದ ಸರ್ಕಾರದವರು ಬೇರೆ ಬಾವಿಗಳನ್ನು ತೆಗೆಯಬೇಕಾಗಿ ಬಂದಿದೆ.

Permission for Cow Slaughter in K.G.F. City.

*Q.—263. Sri S. RAJAGOPAL (K. G. F.).—

Will the Government be pleased to state :—

(*a*) whether necessary permission and facilities are not provided for Cow Slaughter within the Corporation limits of Bangalore City ;

(*b*) if so, why similar permission is not given in K.G.F. City.

A.—Sri D. DEVARAJ URS (Minister for Lobour, Housing and Transport) [on behalf of SRI K. PUTTASWAMY (Minister for Municipal Administration)].—

(*a*) Yes.

(*b*) Permission has been given to the K.G.F. Sanitary Board to provide facilities or Cow Slaughter.

Sri S. RAJAGOPAL.—Sir, since how long this concession is given ?

† Sri D. DEVARAJ URS.—About two months back the Sanitary Board has been informed that they are free to give licences.

Uniform Scales of Pay for the Drawing Teachers in the State.

*Q.—279. Sri S. P. PHAYADE (Ankola).—

Will the Government be pleased to state :—

(*a*) whether they have received any representation from the Drawing Teachers in the State for adequate and uniform pay scale like other Craft Teachers ;

(*b*) the reason for difference in pay scale between Craft Teachers and Drawing Teachers ;

(*c*) whether they are considering the proposal of giving suitable and uniform pay scale to Drawing Teachers ;

(*d*) If so, when it will be given effect to ?

A.—Sri S. R. KANTHI (Minister for Education).—

(*a*) Yes.

(*b*) Because qualifications prescribed for the posts, duration of the courses and the crafts taught are different.

(*c*) Yes.

(*d*) As soon as a decision is taken.

ಶ್ರೀ ಎಸ್. ಪಿ. ಹಾಯಿಡೆ.—ಡ್ರಾಯಿಂಗ್ ಟೀಚರುಗಳಿಂದ ಮನವಿಗಳು ಬಂದು ಎಷ್ಟು ದಿವಸಗಳಾಧವು.

† ಶ್ರೀ ಎಸ್. ಆರ್. ಕಂಠಿ.—ಮನವಿಗಳು ಅನೇಕ ಬಂದಿವೆ. ಎಷ್ಟು ದಿವಸ ಆಯಿತು ಎಂದು ಹೇಳುವುದಕ್ಕಾಗುವುದಿಲ್ಲ. ಮೇಲಿಂದ ಮೇಲೆ ಬರುತ್ತಿವೆ.

ಶ್ರೀ ಎಸ್. ಪಿ. ಹಾಯಿಡೆ.—ಈ ಕ್ರಾಫ್ಟ್‌ನಲ್ಲಿ ಕನೂತಿ ಕೆಲಸ ಮಾಡುವವರು ಬರುತ್ತಾರೆ. ಡ್ರಾಯಿಂಗ್ ಟೀಚರುಗಳು ಬರುವುದಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಡ್ರಾಯಿಂಗ್ ಟೀಚರ್ ಬೇರೆ, ಕ್ರಾಫ್ಟ್ ಟೀಚರ್ ಬೇರೆ. ಕನೂತಿ ಕೆಲಸ ಮಾಡುವವರು ಕ್ರಾಫ್ಟ್‌ನಲ್ಲಿ ಬರುತ್ತಾರೆ, ಡ್ರಾಯಿಂಗ್ ಟೀಚರ್ಸ್ ಅದರಲ್ಲಿ ಬರುವುದಿಲ್ಲ.

Sri SANJEEVANATH AIKALA.—Is it not a fact that the diploma or degree given by the J. J. School of Arts, Bombay, is not recognised by the Government of Mysore and consequently many Drawing Teachers in South Kanara District could not get their salary and increment consistent with the service they have put in ? May I know whether any representation has been received by the Government in this behalf ?

ಶ್ರೀ ಎಸ್. ಆರ್. ಕಂಠಿ.—ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್ ಡಿಪ್ಲೋಮಾ ಪಡೆದಿರುವವರಿಗೆ ಸಂಬಳ ಜಾಸ್ತಿ ಇದೆ. ಮಾನ್ಯ ಸದಸ್ಯರು ಮಧ್ಯಾಸಿನ ವಿಚಾರವನ್ನು ಹೇಳುತ್ತಿದ್ದಾರೆಂದು ಕಾಣುತ್ತದೆ. ಆ ಬಗ್ಗೆ ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಸಿ. ಆರ್. ರಂಗೇ ಗೌಡ.—1963ನೇ ಇಸವಿ ಡಿಸೆಂಬರ್ ತಿಂಗಳಿನಲ್ಲಿ ವಿದ್ಯಾ ನಿಚಿವರಿಗೆ ರಾಜ್ಯದ ಕರಾ ಶಿಕ್ಷಣ ಪರಿಷತ್ತಿನವರು 26 ಠರಾವುಗಳನ್ನು ಕಳಿಸಿದ್ದಾರೆ. ಅವರು ಅವುಗಳ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ಎಸ್. ಆರ್. ಕಂಠಿ.—ಆ ಪ್ರಶ್ನೆ ಇಲ್ಲಿ ಬರುವುದಿಲ್ಲ. ಇದು ಬೇರೆ ಪ್ರಶ್ನೆ ಸ್ವಾಮಿ.

Sri SANJEEVANATH AIKALA.—Did the Government receive a representation from one Drawing Instructor from the Board High School, Udipi to the effect that though he possessed the degree of J. J. School of Arts and came from Madras State, he was not given the salary and increment from 1956 ?

ಶ್ರೀ ಎಸ್. ಆರ್. ಕಂಠಿ.—ಆ ಪ್ರಶ್ನೆಗೆ ಈಗ ಉತ್ತರ ಹೇಳುವುದಕ್ಕಾಗುವುದಿಲ್ಲ. ಅವರು ಅದನ್ನು ನನ್ನ ಗಮನಕ್ಕೆ ತಂದರೆ ನಾನು ನೋಡುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೈಸೂರು ರಾಜ್ಯದ ಚಿತ್ರ ಕಲಾವಿದರ ಪರಿಷತ್ತಿನ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡುವಾಗ ಅವರ ಸಂಬಳ ಸಾರಿಗೆಗಳ ವಿಷಯವನ್ನು ಸರ್ಕಾರ ಬಹಳ ಉದಾರವಾಗಿ ಪರಿಶೀಲಿಸುತ್ತದೆ ಎಂದು ಆಶ್ವಾಸನೆಯನ್ನು ಮಾನ್ಯ ಮಂತ್ರಿಗಳು ಕೊಟ್ಟಿದ್ದರು. ಆ ಆಶ್ವಾಸನೆ ಈಡೇರಬೇಕಾದರೆ ಎಷ್ಟು ಕಾಲ ಬೇಕು, ಸ್ವಾಮಿ ?

ಶ್ರೀ ಎಸ್. ಆರ್. ಕಂಠಿ.—1961ರಲ್ಲಿ ನಾವು ಅವರ ಸಂಬಳ ಸಾರಿಗೆಗಳನ್ನು ಪುನರ್ವಿಮರ್ಶೆ ಮಾಡಿದ್ದೇವೆ. ಈಗ ಅದು ಬಹಳ ಕಡಿಮೆ ಎಂದು ಕೆಲವು ಮನವಿಗಳು ಬಂದಿವೆ. ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಗಳು ಕೆಲವು ಪ್ರಪೋಸಲ್ಸ್ ಕಳಿಸಿದ್ದಾರೆ. ಅವು ಸರ್ಕಾರದ ಪರ್ಯಾಲೋಚನೆಯಲ್ಲಿವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ರಾಜ್ಯದಲ್ಲಿರುವ ಎಲ್ಲ ಸರ್ಕಾರಿ ಹೈಸ್ಕೂಲುಗಳಲ್ಲಿಯೂ ಡ್ರಾಯಿಂಗ್ ಟೀಚರ್ಸ್ ಇದ್ದಾರೆಯೇ ?

ಶ್ರೀ ಎಸ್. ಆರ್. ಕಂಠಿ.—ಸರ್ಕಾರಿ ಹೈಸ್ಕೂಲುಗಳ ವಿಚಾರವಾಗಿ ಮಾತ್ರ ಹೇಳಬಹುದು. ಆ ಮಾಹಿತಿಯೂ ಈಗ ನನ್ನ ಹತ್ತಿರ ಇಲ್ಲ. ಎಲ್ಲ ಹೈಸ್ಕೂಲುಗಳಲ್ಲಿಯೂ ಇದ್ದಾರೆಯೋ ಇಲ್ಲವೋ ಹೇಳುವುದಕ್ಕಾಗುವುದಿಲ್ಲ.